■ ಹನಿ

# ಬೆಕ್ಹಾಮ್ ಮತ್ತು ಬೆಕಿಲೀಕ್ಸ್

ವಿಕಿಲೀಕ್ಸ್ ಎಲ್ಲರಿಗೂ ಗೊತ್ತು. ಜೂಲಿಯನ್ ಅಸಾಂಜೆಯ ಈ ಸಂಸ್ಥೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಲಕ್ಷಾಂತರ ರಹಸ್ಯ ಇಮೇಲ್‌ಗಳನ್ನು ಸೋರಿಕೆ ಮಾಡುವ ಮೂಲಕ ಹಲವಾರು ದೇಶಗಳ ಆಳುವವರ ಎದೆಯಲ್ಲಿ ನಡುಕ ಹುಟ್ಟಿಸಿದ್ದು ಈಗಲೂ ಮುಂದುವರಿದಿರುವ ಕಥೆ. ಅಮೆರಿಕ ಸಹಿತ ಹಲವು ದೇಶಗಳ ರಕ್ಷಣಾ ಇಲಾಖೆಗೇ ಸಂಬಂಧಿಸಿದ ಹಗರಣಗಳ ಮಾಹಿತಿಗಳು ಸೋರಿಕೆಯಾದ ಹಿನ್ನೆಲೆಯಲ್ಲಿ ಅಸಾಂಜೆಯನ್ನು ಹಡೆಮುರಿ ಕಟ್ಟಲು ಹಲವು ದೇಶಗಳ ಮುಖ್ಯಸ್ಥರು ಯತ್ನಿಸುತ್ತಿದ್ದಾರೆ. ಇದೀಗ ಬೆಕಿಲೀಕ್ಸ್ ಸರದಿ! ಬೆಕಿಲೀಕ್ಸ್ ಅಂದರೆ ಬೆಕ್ಹಾಮ್‌ಗೆ ಸಂಬಂಧಿಸಿದ ವೈಯಕ್ತಿಕ ಮಾಹಿತಿಗಳ ಸೋರಿಕೆ! ಬ್ರಿಟನ್ ಸಹಿತ ಫುಟ್‌ಬಾಲ್‌ಪ್ರಿಯ ದೇಶಗಳಲ್ಲಿ ಈಗ ಬೆಕಿಲೀಕ್ಸ್‌ನದ್ದೇ ಸುದ್ದಿ!

ಡೇವಿಡ್ ಬೆಕ್ಹಾಮ್ ಜಗತ್ತು ಕಂಡ ಅತ್ಯುತ್ತಮ ಫುಟ್‌ಬಾಲ್ ಆಟಗಾರರಲ್ಲಿ ಮುಂಚೂಣಿಯಲ್ಲಿ ನಿಲ್ಲುವ ಹೆಸರು. ವಿಶ್ವದ ಮೂರು ಅತ್ಯುತ್ತಮ ಫುಟ್‌ಬಾಲ್ ಕ್ಲಬ್‌ನಲ್ಲಿ ಒಂದೆಂದು ಹೆಸರು ಪಡೆದಿರುವ ಮ್ಯಾಂಚೆಸ್ಟರ್ ಯುನೈಟೆಡ್ ನ ನಾಯಕನಾಗಿ ಬೆಕ್ಹಾಮ್‌ನದ್ದು ಮುಂಚೂಣಿಯ ಹೆಸರು. ಜತೆಗೇ ಹಲವು ವರ್ಷಗಳ ಕಾಲ ಇಂಗ್ಲೆಂಡ್ ತಂಡದ ನಾಯಕನಾಗಿ ಮೆರೆದ ಪಾರಮ್ಯವೂ ಬೆಕ್ಹಾಮ್‌ನನ್ನು ದಂತಕಥೆಯ ಸಾಲಿನಲ್ಲಿ ನಿಲ್ಲಿಸಿದೆ. ವೃತ್ತಿಪರ ಫುಟ್‌ಬಾಲ್‌ನಿಂದ 2013ರಲ್ಲಿ ನಿವೃತ್ತಿ ಪಡೆದರೂ, ಬೆಕ್ಹಾಮ್ ಇವತ್ತಿಗೂ ಇಂಗ್ಲಿಷರ ಅತ್ಯಂತ ಜನಪ್ರಿಯ ಆಟಗಾರ. ಆಟದಲ್ಲಿ ಶಿಸ್ತಿಗೆ ಹೆಸರಾದ ಬೆಕ್ಹಾಮ್ 2005ರಿಂದ ಬ್ರಿಟನ್ನಿನ ಯುನಿಸೆಫ್ ರಾಯಭಾರಿಯೂ ಹೌದು. ಹಲವಾರು ಚಾರಿಟಿ ಯೋಜನೆಗಳಲ್ಲಿ ಭಾಗವಹಿಸಿರುವ ಬೆಕ್ಹಾಮ್‌ನನ್ನು ಇಂಗ್ಲೆಂಡಿನ ಜನತೆ ದೇಶದ ಸಾಂಸ್ಕೃತಿಕ ರಾಯಭಾರಿ ಎಂದೇ ಪರಿಗಣಿಸಿದ್ದಾರೆ.

ಈಗ ಸೋರಿಕೆಯಾಗಿರುವ ಬೆಕ್ಹಾಮ್‌ನ ವೈಯಕ್ತಿಕ ಇಮೇಲ್‌ಗಳು ಈತನ ಈ ಸಜ್ಜನ ಇಮೇಜನ್ನು ನುಚ್ಚುನೂರು ಮಾಡುವಂತಿವೆ. ಹ್ಯಾಕರ್‌ಗಳು ಬೆಕ್ಹಾಮ್‌ನನ್ನು ಒಂದೇ ಸಮನೆ ಬೆನ್ನುಹತ್ತಿದ್ದಾರೆ. ಒಟ್ಟು 18.6 ಲಕ್ಷ ಇಮೇಲ್‌ಗಳ ಕಳವಾಗಿವೆ ಎನ್ನುವುದು ಒಂದು ಅಂದಾಜು. ಅದರಲ್ಲಿ ಮುಖ್ಯವಾಗಿ ಎರಡು ಆರೋಪಗಳು ದೊಡ್ಡ ಸುದ್ದಿಯಾಗಿವೆ. ತನಗೆ ನೈಟ್‌ಹುಡ್ ಹುದ್ದೆ ಸಿಗದಿದ್ದುದಕ್ಕೆ ಬೆಕ್ಹಾಮ್ ಇಂಗ್ಲೆಂಡಿನ ರಾಣಿಯ ಮೇಲೆ ಯದ್ವಾಯದ್ವಾ ಭಾಷೆಯನ್ನು ಉಪಯೋಗಿಸಿ ಹರಿಹಾಯ್ದಿರುವುದು ಮೊದಲನೆಯದ್ದು. ಮಕ್ಕಳ ಕಲ್ಯಾಣಕ್ಕಾಗಿ ಯುನಿಸೆಫ್ ರಾಯಭಾರಿ ಆದದ್ದಕ್ಕೆ ಹೇರಳ ಹಣ ಪಡೆದಿದ್ದಾನೆ ಎನ್ನುವುದು ಇನ್ನೊಂದು. ಯುನಿಸೆಫ್ ಜತೆಗೆ ಒಪ್ಪಂದವಾಗುವಾಗ ತಮ್ಮ ಸಹಾಯಕರಿಗೆ ಕಳಿಸಿದ ಇಮೇಲ್‌ನಲ್ಲಿ ಬೆಕ್ಹಾಮ್ "ಸ್ವಂತ ಹಣದಿಂದ ಚಾರಿಟಿ ನಡೆಸಲು ಸಾಧ್ಯವಿಲ್ಲ" ಎಂದು ಸ್ಪಷ್ಟವಾಗಿ ಹೇಳಿದ್ದಾನಂತೆ! ಒಟ್ಟಾರೆ ಈ ಕೋಲಾಹಲದಿಂದಾಗಿ "ಬ್ರ್ಯಾಂಡ್ ಬೆಕ್ಹಾಮ್" ಗೆ ದೊಡ್ಡ ಹೊಡೆತ ಬಿದ್ದಿದೆ ಎನ್ನುವುದು ವೀಕ್ಷಕರ ಅಭಿಪ್ರಾಯ.



ಈ ಇಮೇಲ್ ಸೋರಿಕೆಗಳ ಬಗ್ಗೆ ಈಗ ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ಜತೆಗೆ ಬೆಕ್ಹಾಮ್ ಕೂಡಾ ಪೋರ್ಚುಗೀಸ್ ತನಿಖಾ ಸಂಸ್ಥೆಯೊಂದರ ಮೂಲಕ ತನಿಖೆ ನಡೆಸುತ್ತಿದ್ದಾನೆ. ಕೆಲವರು ಈ ಇಮೇಲ್‌ಗಳನ್ನು ಇಟ್ಟುಕೊಂಡು 10 ಲಕ್ಷ ಪೌಂಡ್ ಹಣ ಪಡೆಯಲು ಬೆಕ್ಹಾಮ್‌ನನ್ನು ಬ್ಲ್ಯಾಕ್‌ಮೇಲ್ ಮಾಡಿದ್ದಾರೆದೂ ಸುದ್ದಿ ಇದೆ. ಹಾಗೆ ನೋಡಿದರೆ ಬೆಕ್ಹಾಮ್‌ಗೆ ಚಾರಿಟಿ ನಡೆಸಲು ದುಡ್ಡಿನ ಕೊರತೆಯೇನೂ ಇಲ್ಲ. 20 ವರ್ಷಗಳ ಕಾಲ ಅಂತರರಾಷ್ಟ್ರೀಯ ಫುಟ್‌ಬಾಲ್‌ನಲ್ಲಿ ಅದ್ವಿತೀಯನಾಗಿ ಮೆರೆದ ಬೆಕ್ಹಾಮ್, ಒಂದು ಕಾಲದಲ್ಲಿ ತನ್ನ ಕ್ಲಬ್‌ನಿಂದ ಐದು ಕೋಟಿ ಡಾಲರ್ ಸಂಭಾವನೆ ಪಡೆಯುತ್ತಿದ್ದು ಜಗತ್ತಿನಲ್ಲೇ ಅತ್ಯಧಿಕ ಸಂಭಾವನೆ ಪಡೆದ ಆಟಗಾರ ಎಂದು ಖ್ಯಾತಿ ಹೊಂದಿದ್ದ. ಈಗಲೂ ಮಾಡೆಲಿಂಗ್, ಉದ್ಯಮಗಳಲ್ಲಿ ಲಕ್ಷಾಂತರ ಡಾಲರ್ ದುಡಿಮೆ ಅವನದ್ದು. 450 ದಶಲಕ್ಷ ಅಮೆರಿಕನ್ ಡಾಲರ್‌ನಷ್ಟು ನಿವ್ವಳ ಆಸ್ತಿ ಹೊಂದಿರುವ ಈ ಶ್ರೀಮಂತ ಆಟಗಾರನಿಗೆ ಚಾರಿಟಿಗೆ ಯುನಿಸೆಫ್‌ನಿಂದ ದುಡ್ಡು ವಸೂಲಿ ಮಾಡಲು ಮನಸ್ಸಾದರೂ ಹೇಗೆ ಬಂತು..? ಎನ್ನುವುದು ಅಭಿಮಾನಿಗಳ ಪ್ರಶ್ನೆ.

ವಿವಾದಗಳು ಏನೇ ಇರಲಿ, ಆಟಗಾರನಾಗಿ ಬೆಕ್ಹಾಮ್ ಇವತ್ತಿಗೂ ಸರ್ವಶ್ರೇಷ್ಠ ಮಾದರಿಯೇ. ಆತನ ಲಾಂಗ್ ಪಾಸಿಂಗ್ ಮತ್ತು ಕ್ರಾಸಿಂಗ್ ಸಾಮರ್ಥ್ಯಗಳು ಇವತ್ತಿನ ಆಟಗಾರರಿಗೂ ಅಧ್ಯಯನ ಮಾದರಿ. ಫ್ರೀ ಕಿಕ್‌ನಲ್ಲಿ ಚೆಂಡನ್ನು ಬೆಂಡ್ ಮಾಡುವ ಆತನ ಶೈಲಿಯಂತೂ ಅತ್ಯದ್ಭುತ. ಮೈದಾನದ ಅರ್ಧ ಭಾಗದಲ್ಲಿಯೇ ನಿಂತು ದೂರದ ಗೋಲ್‌ಪೋಸ್ಟಿನೊಳಗೆ ಆತ ಹಲವು ಸಲ ಗೋಲು ಬಾರಿಸಿದ್ದನ್ನು ನಂಬಲೂ ಸಾಧ್ಯವಿಲ್ಲ! 20 ವರ್ಷಗಳ ಕಾಲ ಅಂತರರಾಷ್ಟ್ರೀಯ ಫುಟ್‌ಬಾಲ್‌ನಲ್ಲಿ ಮಿಂಚಿದ ಬೆಕ್ಹಾಮ್ ಈ ಅವಧಿಯಲ್ಲಿ ಒಟ್ಟು 19 ಪ್ರಮುಖ ಟ್ರೋಫಿಗಳನ್ನು ತನ್ನ ತಂಡ ಗೆಲ್ಲುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾನೆ. ನಾಲ್ಕು ದೇಶಗಳಲ್ಲಿ ಲೀಗ್ ಪ್ರಶಸ್ತಿಗಳನ್ನು ಗೆದ್ದ ತಂಡದಲ್ಲಿದ್ದ ಏಕೈಕ ಇಂಗ್ಲಿಷ್ ಆಟಗಾರ ಎಂಬ ಕೀರ್ತಿಯೂ ಈತನದ್ದು. 17ರ ಹರೆಯದಲ್ಲಿ ಪ್ರತಿಷ್ಠಿತ ಮ್ಯಾಂಚೆಸ್ಟರ್ ಯುನೈಟೆಡ್ ಕ್ಲಬ್ ತಂಡಕ್ಕೆ ಸೇರ್ಪಡೆಯಾದ ಆತ ಆರು ಸಲ ಕ್ಲಬ್ ಪ್ರೀಮಿಯರ್ ಲೀಗ್ ಪ್ರಶಸ್ತಿ ಗೆಲ್ಲುವಲ್ಲಿ ಪ್ರಮುಖ ಪಾತ್ರ ವಹಿಸಿದ. ಬಳಿಕ ರಿಯಲ್ ಮ್ಯಾಡ್ರಿಡ್, ಮಿಲಾನ್, ಲಾ ಗೆಲಾಕ್ಸಿ, ಪ್ಯಾರಿಸ್ ಸೈಂಟ್ ಜರ್ಮನ್– ಹೀಗೆ ಪ್ರತಿಷ್ಠಿತ ಕ್ಲಬ್‌ಗಳ ಮಧ್ಯೆಯೇ ಓಡಾಡಿದ. 21ರ ಹರೆಯದಲ್ಲಿ (1996ರಲ್ಲಿ) ಇಂಗ್ಲೆಂಡ್ ತಂಡಕ್ಕೆ ಸೇರ್ಪಡೆಯಾಗಿ, ನಾಯಕನಾಗಿ 59 ಪಂದ್ಯಗಳಲ್ಲಿ ಮುನ್ನಡೆಸಿದ ಕೀರ್ತಿ ಇವನದ್ದು.

ಸ್ಪೈಸ್ ಗರ್ಲ್ ಬ್ಯಾಂಡ್‌ನ ಖ್ಯಾತ ಗಾಯಕಿ ವಿಕ್ಟೋರಿಯಾಳನ್ನು ಮದುವೆಯಾಗಿ ನಾಲ್ಕು ಮಕ್ಕಳ ತಂದೆಯಾಗಿರುವ ಬೆಕ್ಹಾಮ್ ಈಗ 41ರ ಹರೆಯದಲ್ಲಿ ಹೀಗೆ ಖಾಸಗಿ ಇಮೇಲ್‌ಗಳು ಬಹಿರಂಗಗೊಂಡು ಅಪಖ್ಯಾತಿಗೆ ಒಳಗಾಗಿರುವುದು ಆತನ ಕೋಟ್ಯಂತರ ಅಭಿಮಾನಿಗಳಿಗೆ ಕಿರಿಕಿರಿ ಉಂಟು ಮಾಡಿರುವುದಂತೂ ನಿಜ. ಈ ಇಮೇಲ್‌ಗಳ ಸತ್ಯಾಸತ್ಯತೆ ಖಚಿತಗೊಳ್ಳುವವರೆಗೂ ಬೆಕ್ಹಾಮ್‌ಗೆ ಟೆನ್ಶನ್ ಇದ್ದದ್ದೇ. "ಇಮೇಲ್‌ಗಳನ್ನು ಅರ್ಧಕ್ಕರ್ಧ ಕತ್ತರಿಸಿ ಅಪಾರ್ಥ ಬರುವಂತೆ ಪ್ರಕಟಿಸಲಾಗಿದೆ" ಎನ್ನುವ ಪ್ರತಿಕ್ರಿಯೆ ನೀಡಿರುವ ಬೆಕ್ಹಾಮ್, ಸಾಮಾಜಿಕ ಮಾಧ್ಯಮಗಳ ವಿರುದ್ಧ ಕೆಂಡವಾಗಿದ್ದಾನೆ. ಆದರೆ ಹ್ಯಾಕರ್‌ಗಳು ತಮ್ಮ ಕೆಲಸವನ್ನು ಸದ್ಯಕ್ಕೆ ನಿಲ್ಲಿಸುವಂತೆ ಕಾಣುತ್ತಿಲ್ಲ. ■

Printed and Published by B.A. Ravi on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65